**<u>ದಿನಾಂಕ: 07.04.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎಂ ಹೆಚ್ ವಕೀಲರಿಂದಃ</u>**

ನಾನು ವ್ಯವಸಾಯ ಮತ್ತು ಮಾವಿನ ಹಣ್ಣಿನ ವ್ಯಾಪಾರ ಮಾಡುತ್ತೇನೆ. ನನ್ನ ಹೆಸರಿನಲ್ಲಿ 2 ಎಕರೆ ಅಡಿಕೆ ತೋಟ ಇದೆ. ಅದರ ಸರ್ವೆ ನಂಬರ 29 ಆಗಿರುತ್ತದೆ. ಆ ಜಮೀನು ಗಾಜಿಪುರ ಗ್ರಾಮದಲ್ಲಿರುತ್ತದೆ. ನನ್ನ ತಂದೆಯ ಹೆಸರಿನಲ್ಲಿ ಸರ್ವೆ ನಂಬರ 30 ಮತ್ತು 31 ರಲ್ಲಿ ಒಟ್ಟು 5 ಎಕರೆ ಜಮೀನು ಗಾಜಿಪುರ ಗ್ರಾಮದಲ್ಲಿರುತ್ತದೆ. ಆ ಜಮೀನುಗಳ ಬಗ್ಗೆ ಉತಾರೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಅವಶ್ಯಕತೆ ಇದ್ದರೆ ಹಾಜರು ಪಡಿಸುತ್ತೇನೆ. ಆರೋಪಿ ನನ್ನ ಚಿಕ್ಕಪ್ಪನ ಮಗನಾಗಿದ್ದು ಮಾವಿನ ಹಣ್ಣಿನ ವ್ಯಾಪಾರ ಮತ್ತು ಇಟ್ಟಂಗಿ ವ್ಯಾಪಾರ ಮಾಡುತ್ತಾರೆ. ಆರೋಪಿಯ ತಂದೆಯ ಹೆಸರಿನಲ್ಲಿ ಜಮೀನುಗಳು ಇವೆ. ಆ ಜಮೀನಿನಲ್ಲಿ ಅಡಿಕೆ ತೋಟ ಮಾಡಿರುತ್ತಾರೆ. ಆರೋಪಿಗೆ ಮತ್ತು ಅಡಿಕೆ ತೋಟ, ಇಟ್ಟಂಗಿ ಮತ್ತು ಮಾವಿನ ಹಣ್ಣಿನ ವ್ಯಾಪಾರದಿಂದ ಸಾಕಷ್ಟು ಆದಾಯ ಇದೆ ಎಂದರೆ ಸರಿ. ಆರೋಪಿ ಈ ಹಿಂದೆ ನನ್ನಿಂದ ಸುಮಾರು 2 ರಿಂದ 3 ಬಾರಿ ಹಣ ಪಡೆದು ವಾಪಸ್ಸು ಕೊಟ್ಟಿರುತ್ತಾರೆ. ನಾನು 2024 ರಲ್ಲಿ ರಾ. 2 ಲಕ್ಷ ಹಣ ಕೊಟ್ಟಿರುತ್ತೇನೆ.ಆ ಹಣವನ್ನು ಎರಡು ತಿಂಗಳ ಒಳಗಾಗಿ ವಾಪಸ್ಸು ಕೊಟ್ಟಿರುತ್ತಾರೆ. ನನ್ನ ಹೆಸರಿನಲ್ಲಿ ಎಸ್ ಬಿ ಐ ಹಾನಗಲ್ ನಲ್ಲಿ ಖಾತೆ ಇದೆ. ನಾನು ಚೆಕ್ ಪುಸ್ತಕ ಪಡೆದುಕೊಂಡಿರುವುದಿಲ್ಲ. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಮಹ್ಮಸಲೀಂ ಬಡಗಿಯವರು ನನ್ನ ಚಿಕ್ಕಪ್ಪನ ಮಗ. ಆತ ಆರೋಪಿಗೆ ಹಣ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿ ಯಾರ ಯಾರ ಬಳಿ ಹಣ ಸಾಲವಾಗಿ ಪಡೆದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ನನ್ನ ವಿರುದ್ಧ ಹಾನಗಲ್ ಪೋಲಿಸ್ ಠಾಣೆಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದರು. ಈ ಬಗ್ಗೆ ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಹಾನಗಲ್ ಪೋಲಿಸ್ ಠಾಣೆಗೆ ಹೋಗಿದ್ದೆನು. ಠಾಣೆಯಲ್ಲಿ ನಾನು ಮತ್ತು ಆರೋಪಿ

ಹಿರಿಯರುಗಳು ಗ್ರಾಮದಲ್ಲಿ ಬರೆಹರಿಸಿಕೊಳ್ಳುತ್ತೇವೆ ಎಂದು ಮುಚ್ಚಳಿಕೆ ಬರೆದುಕೊಟ್ಟೆವು ಎಂದರೆ ಸರಿಯಲ್ಲ.

2. ಆ ನಂತರ ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಕೂಡಿ ಆರೋಪಿಯ ವಿರುದ್ಧ ಎರಡು ಪ್ರಕರಣಗಳನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರ ಆರೋಪಿ ನನ್ನ ಮತ್ತು ನನ್ನ ಚಿಕ್ಕಪ್ಪನ ಮಗನ ವಿರುದ್ಧ ಹಾನಗಲ್ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಪಿ ಸಿ ನಂಬರ 325/2024 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ ಸಾಕ್ಷಿಯುಆ ಪ್ರಕರಣದ ವಿರುದ್ದ ಮಾನ್ಯ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಆ ತಡಯಾಜ್ಞೆ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ಮಹ್ಮದಸಲೀಂ ಬಡಗಿಯವರು ವ್ಯವಸಾಯ, ಮಾವಿನ ಹಣ್ಣಿನ ವ್ಯಾಪಾರ ಮಾಡುತ್ತಾರೆ. ನಾನು ಆರೋಪಿಯ ಅಂಗಡಿಗೆ ಹೋಗಿ ಎರಡು ಚೆಕ್ ಗಳನ್ನು ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸಾಕ್ಷಿಯು ಆತನ ಅಂಗಡಿ ಇಲ್ಲ ಎಂದು ಸ್ವತಃ ನುಡಿಯುತ್ತಾರೆ. ಆ ಚೆಕ್ ಗಳ ಮೇಲಿನ ಬರವಣಿಗೆಯನ್ನು ನಾವುಗಳೇ ಬರೆದು ನಾನು ಈ ಪ್ರಕರಣವನ್ನು ಮತ್ತು ನನ್ನ ಸಹೋದರ ಮತ್ತೊಂದು ಪ್ರಕರಣ ಆರೋಪಿಯ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ. ನಮ್ಮ ಕುಟುಂಬದಲ್ಲಿ ಒಟ್ಟು 6 ಜನ ವಾಸವಾಗಿರುತ್ತೇವೆ. ನಮ್ಮ ಕುಟಂಬ ನಿರ್ವಹಣೆಗೆ ತಿಂಗಳಿಗೆ ರೂ.20 ರಿಂದ 30 ಸಾವಿರ ಖರ್ಚಾಗುತ್ತದೆ. ನನ್ನ ವ್ಯವಸಾಯ ಮತ್ತು ವ್ಯಾಪಾರದಿಂದ ವರ್ಷಕ್ಕೆ ರೂ. 3 ಲಕ್ಷ ಅದಾಯ ಇದೆ. ನನಗೆ ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಆರೋಪಿಗೆ ಹಣ ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಮುಂಡಗೋಡ ತಾಲೂಕಿನ ಮರಗಡಿ ಗ್ರಾಮದ ಸರ್ವೆ ನಂಬರ 29/1 ರಲ್ಲಿ 23 ಗುಂಟೆ 6 ಆಣೆ ಜಮೀನು ಇದೆ ಎಂದರೆ ಸರಿ. ಅದೇ ರೀತಿ ನನ್ನ ತಮ್ಮ ಮಹ್ಮದಖಾಸೀಂ ರವರ ತಂದೆಯ ಹೆಸರಿನಲ್ಲಿ ಸರ್ವೆ ನಂಬರ 29/1 ರ 37 ಗುಂಟೆ ವ್ಯವಸಾಯ ಜಮೀನು ಇದೆ ಎಂದರೆ ಸರಿ. ಆ ಎರಡು ಜಮೀನುಗಳನ್ನು ನನ್ನ ತಂದೆ ಮತ್ತು ನನ್ನ ಸಹೋದರ ಇಮಾಮಸಾಬ ಕಾಶಂಬಿ ರವರ ತಂದೆಯವರು ಆರೋಪಿಯ ತಂದಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದರೆ ಆ ವ್ಯವಹಾರ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಆ ಜಮೀನನ್ನು ರೂ. 7 ಲಕ್ಷದ 4 ಸಾವಿರ ಗಳಿಗೆ ಮಾರಾಟ

ಮಾಡಿದ್ದಾರೆ ಎಂದರೆ ಸರಿ. ಆ ಹಣವನ್ನು ತನ್ನ ಆರೋಗ್ಯಕ್ಕಾಗಿ ಉಪಯೋಗಿಸಿಕೊಂಡಿರುತ್ತಾರೆ. ನಮ್ಮ ಕುಟಂಬದಲ್ಲಿ ಸಾಕಷ್ಟು ಅದಾಯ ಇಲ್ಲದೇ ಇರುವುದರಿಂದ ನನ್ನ ತಂದೆ ಆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಉಪನೋದಾಣಾಧಿಕಾರಿ ಮುಂಡಗೋಡದಲ್ಲಿ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ನನ್ನ ತಂದಯವರು ಮತ್ತು ನನ್ನ ಚಿಕ್ಕಪ್ಪ ಆ ಜಮೀನನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿರುವುದರಿಂದ ಆರೋಪಿಗೆ ಸೇರಿದ ಚೆಕ್ ಗಳನ್ನು ತೆಗೆದುಕೊಂಡು ಹೋಗಿ ಈ ಪ್ರಕರಣ ಮತ್ತು ನನ್ನ ಸಹೋದರ ಮೂಲಕ ಮತ್ತೊಂದು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಸ್ಪ್ಟಂಬರ್–2023 ರಂದು ನನ್ನಿಂದ ಹಣ ಕೇಳಿರುತ್ತಾರೆ. ಆರೋಪಿ ಹಣ ಕೇಳಿದ 8 ದಿನಗಳ ಒಳಗಾಗಿ ಹಣ ಕೊಟ್ಟಿರುತ್ತೇನೆ. ಆ ಹಣ ಅಡಿಕೆ ತೋಟದಿಂದ ಹಾಗೂ ವ್ಯವಸಾಯದ ಮೂಲದಿಂದ ಬಂದಿದ್ದು. ಅಲ್ಲದೇ ನಾನು ನಮ್ಮ ಜಮೀನನ್ನು ರೂ.4 ಲಕ್ಷಗಳಿಗೆ ವರ್ದಿ ಗ್ರಾಮದ ಕಲಂದರ ರವರಿಗೆ ಲಾವಣಿಗೆ ಹಾಕಿದ್ದೆನು.

3. ನಾನು ಅಡಿಕೆ ಕಟಾವು ಮಾಡಿದ ಹಂತ ಹಂತವಾಗಿ ಹಣ ಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಒಟ್ಟಿಗೆ ಕಟಾವು ಮಾಡಿ ಹಣ ಪಡೆದುಕೊಂಡಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ನಾನು ಆರೋಪಿಗೆ 500 ಮತ್ತು 200 ರೂ. ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ ಆದರೆ ಎಷ್ಟು ನೋಟುಗಳನ್ನು ಕೊಟ್ಟೆನು ಎಂಬುದು ನನಗೆ ಈಗ ನನಗೆ ನೆನಪಿಲ್ಲ.ಆರೋಪಿ ಒಟ್ಟು ರೂ. 4 ಲಕ್ಷ ಹಣವನ್ನು ಕೇಳಿದ್ದರು. ನಾನು ಆರೋಪಿಗೆ ಹಣ ಕೊಟ್ಟಾಗ ನಮ್ಮ ಊರಿನ ಮಹಬೂಬಅಲಿ ಇದ್ದರು. ನಾನು ಹಣ ಕೊಟ್ಟ 6 ತಿಂಗಳುಗಳ ನಂತರ ವಾಪಸ್ಸು ಕೊಡುವಂತೆ ಆರೋಪಿಗೆ ಕೇಳಿದೆನು. ನಾನು ಆ ಹಣವನ್ನು ದಿನಾಂಕ 01.05.2024 ರಂದು ವಾಪಸ್ಸು ಕೊಡುವಂತೆ ಕೇಳಿದೆನು. ದಿನಾಂಕ 10.09.2024 ರಂದು ಚೆಕ್ ಕೊಟ್ಟರು. ಚೆಕ್ ಮೇಲಿರುವ ಬರವಣಿಗೆ ಮತ್ತು ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್